**KARNTAKA INFORMATION COMMISSION ON SALE DEEDS AND OTHER DOCUMENTS IN ELECTRONIC FORMAT:**

ಕಮಾಹ 2336 ದೂರು 2009
ಕರ್ನಾಟಕ ಮಾಹಿತಿ ಆಯೋಗ
( ಶ್ರೀ ದೀಪಕ್ ಜಿ. ಗಾಲ ವಿರುದ್ಧ ಸಾ.ಮಾ.ಅ. ಉಪನೋಂದಣಾಧಿಕಾರಿಗಳ ಕಛೇರಿ
ವಿಕಾಸ ಭವನ ಗುಲ್ಬರ್ಗ)

ಆದೇಶ

10.07.2009

1. ಅರ್ಜಿದಾರರು ಹಾಜರಿದ್ದರೆ. ಪ್ರತಿವಾದಿ ಶ್ರೀ. ಗಿರೀಶ್ ಚಂದ್ರ, ಸಾ.ಮಾ.ಆ ಹಾಗೂ ಉಪನೋಂದಣಾಧಿಕಾರಿ , ವಿಕಾಸ ಭವನ, ಗುಲ್ಬರ್ಗರವರು ಹಾಜರಿದ್ದರೆ.
2. ಅರ್ಜಿದಾರರು ಮಾಹಿತಿ ಕೋರಿಕೆ ದಿನಾಂಕ 4.2.2009ರಲ್ಲಿ ಮಾಹಿತಿ ಹಕ್ಕು ಕಾಯ್ದೆ ಅನ್ವಯ ಇ ಕೆಳಕಂಡ 2 ವಿಷಯಗಳ ಬಗ್ಗೆ ಮಾಹಿತಿಯನ್ನು ಕೋರಿದೆ.
   1. Copies of Documents (Sale Deeds, Trust Deeds and any deeds etc.) registered during 1st January 2007 to till the furnishing information to this application in Electronic Format (P.D.F. format).
   2. Document Summary Report in respect of Documents Registered during above period in Electronic format only.
3. ಪ್ರತಿವಾದಿಯು ತಮಗೆ ಮಾಹಿತಿ ಹಕ್ಕು ಕಾಯ್ದೆ ಕಲಂ 18(1))(ಸಿ)ರನ್ವಯ ನಿಗದಿತ 30 ದಿನಗಳೊಳಗಾಗಿ ಯಾವುದೇ ಮಾಹಿತಿಯನ್ನಾಗಲೀ/ಹಿಂಬರಹವನ್ನಾಗಲೀ ನೀಡಿರುವುದಿಲ್ಲವೆಂದು ಅರ್ಜಿದಾರರು ಮಾ.ಹ.ಕಾ. ಕಲಂ 18(1))ರನ್ವಯ ದಿನಾಂಕ 20.03.2009 ರಂದು ಆಯೋಗಕ್ಕೆ ದೂರು ಸಲ್ಲಿಸಿರುತ್ತಾರೆ . ಸದರಿ ದೂರನ್ನು ಪರಿಶೀಲಿಸಿದ ಆಯೋಗ ದಿನಾಂಕ 03.06.2009 ರಂದು ಮಧ್ಯಂತರ ಆದೇಶವನ್ನು ಹೊರಡಿಸಿ , ಪ್ರತಿವಾದಿಯು ಅರ್ಜಿದಾರರಿಗೆ ನಿಗದಿತ ಸಮಯದೊಳಗೆ ಮಾಹಿತಿ ನೀಡದೇ ಇರುವುದಕ್ಕೆ ಮಾಹಿತಿ ಅಧಿನಿಯಮ 2005ರ ಸೆಕ್ಷನ್ 20(1) ರ ಅಡಿಯಲ್ಲಿ ಏಕೆ ದಂಡ ವಿಧಿಸಬಾರದು ಎಂಬುದಕ್ಕೆ ವಿವರಣೆಯನ್ನು 30ದಿನಗಳೊಳಗಾಗಿ ಆಯೋಗಕ್ಕೆ ಸಲ್ಲಿಸಲು ಆದೇಶಿಸಿರುತ್ತದೆ, ಹಾಗೂ ಮಾಹಿತಿ ನೀಡದಿದ್ದಲ್ಲಿ ತಕ್ಷಣವೇ ಅರ್ಜಿದಾರರಿಗೆ ಮಾಹಿತಿನ್ನು ನೀಡಿ , ಸಂಬಂಧಪಟ್ಟ ಮಾಹಿತಿಯ ಪ್ರತಿಯನ್ನು ಆಯೋಗಕ್ಕೂ ಕಡ್ಡಾಯವಾಗಿ ಕಳುಹಿಸಲು ನಿರ್ದೇಶಿಸಿದೆ.
4. ಆಯೋಗದ ಮದ್ಯಂತ ಆದೇಶವನ್ನು ಸ್ವೀಕರಿಸಿದ ನಂತರ, ಪ್ರತಿವಾದಿಯು ಆಯೋಗಕ್ಕೆ ದಿ. 09.06.2009 ರಂದು ಪತ್ರ ಬರೆದು , ಅರ್ಜಿದಾರರು ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ , ಕಚೇರಿಯಲ್ಲಿ ನೋಂದಣಿಯಾದ ದಸ್ತಾವೇಜುಗಳನ್ನು ಸಿ.ಡಿ ಯಲ್ಲಿ ನಕಲು ಮಾಡಿ ಇಡಲಾಗುತ್ತದೆ, ಸದರಿ ಸಿ.ಡಿಗಳು ಕಾವೇರಿ ಸಾಫ್ಟ್ ವೇರ್ ಬಿಟ್ಟರೇ ಬೇರೆ ಯಾವುದೇ ಸಾಫ್ಟ್ ವೇರ್ ನಲ್ಲಿ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಸದರಿ ಅರ್ಜಿದಾರರು ಕೇಳಿರುವ ಮಾಹಿತಿಯನ್ನು ತಯಾರಿಸಿಕೊಡಲು ಇ.ಸಿ.ಐ.ಎಲ್ ಬೆಂಗಳೂರು ಇವರಿಗೆ ನಿರ್ದೇಶನ ಮಾಡಲು ಆಯುಕ್ತರು ಬೆಂಗಳೂರು ರವರಿಗೆ ದಿ 25.02.2009 ರಂದು ಪತ್ರವನ್ನು ಬರೆಯಲಾಗಿದ್ದು , ಸಂಬಂಧಿಸಿದ ನೋಂದಣಿ ಮಹಾ ಪರಿವಿಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರುರವರು ದಿ. 09.03.2009 ರ ಪತ್ರದಲ್ಲಿ ಇ.ಸಿ.ಐ.ಎಲ್ ರವರಿಗೆ ಅರ್ಜಿದಾರರು ಕೋರಿರುವ ಮಾಹಿತಿಯನ್ನು ತಯಾರಿಸಲು ಸೂಚಿಸಿದ್ದರ ಮೇರೆಗೆ ಇ.ಸಿ.ಐ.ಎಲ್ ಅರ್ಜಿದಾರರು ಕೋರಿದ ಮಾಹಿತಿಯನ್ನು ತಯಾರಿಸಿ ದಿ. 21.05.2009 ರಂದು ಸಲ್ಲಿಸಿದ್ದು ತದನಂತರ ದಿ. 21.05.2009 ರಂದು ಅರ್ಜಿದಾರರಿಗೆ ಪತ್ರ ಬರೆದು ಶುಲ್ಕ ಭರಿಸಿ ಕೋರಿದ ಮಾಹಿತಿಯನ್ನು ಪಡೆಯಲು ಸೂಚಿಸಿರುವುದಾಗಿ , ಅರ್ಜಿದಾರರು ಶುಲ್ಕ ಭರಿಸಿ ಮಾಹಿತಿಯನ್ನು ಪಡೆದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅರ್ಜಿದಾರರು ಕೋರಿದ ಮಾಹಿತಿಯನ್ನು ಪಿ. ಡಿ. ಎಫ್ ಫಾರ್ಮೆಟ್ ನಲ್ಲಿ ತಯಾರಿಸಿಕೊಡಲು ಕಾಲಾವಕಾಶ ತೆಗೆದುಕೊಳ್ಳಲಾಗಿದಿಯೇ ವಿನಃ ಉದ್ದೇಶಪೂರ್ವಕವಾಗಿ ವಿಳಂಬ ಮಾಡಿರುವುದಿಲ್ಲವೆಂದು ತಿಳಿಸಿ, ಪ್ರಕರಣ ವಿಲೇವರಿ ಮಾಡಲು ಕೋರಿರುತ್ತಾರೆ ಹಾಗೂ ಎಲ್ಲಾ ಪತ್ರಗಳ ಪ್ರತಿಗಳನ್ನು ಆಯೋಗದ ಮಾಹಿತಿಗಾಗಿ ಸಲ್ಲಿಸಿರುತ್ತಾರೆ.
5. ಪ್ರತಿವಾದಿಯು ಆಯೋಗಕ್ಕೆ ಸಲ್ಲಿಸಿರುವ ಪ್ರತಿಗಳನ್ನು ಗಮನಿಸಿದ ಆಯೋಗ, ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ಯಾವುದೇ ತಿಳುವಳಿಕೆ ಇಲ್ಲದಿರುವ ಬಗ್ಗೆ ತೀವ್ರ ಆಕ್ಷೇಪ ಹಾಗೂ ಆಶ್ಚರ್ಯ ವ್ಯಕ್ತಪಡಿಸಿ , ಪ್ರತಿವಾದಿಗೆ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ತಿಳುವಳಿಕೆ ನೀಡಿತು.

6. ಅರ್ಜಿದಾರರು ಕೋರಿರುವ ಮಾಹಿತಿ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ 58 ಸಿಡಿ ಗಳಾಗಿದ್ದು ನಿಗಧಿತ ಅವಧಿಯಲ್ಲಿ ಅರ್ಜಿದಾರರಿಗೆ ಮಾಹಿತಿ ಶುಲ್ಕವನ್ನು ಪಾವತಿಸುವಂತೆ ತಿಳಿಸದೇ ಇರುವುದರಿಂದ 28 ಸಿಡಿ ಗಳನ್ನು ಉಚಹಿತವಾಗಿ ಹಾಗೂ ಉಳಿದ 30 ಸಿಡಿ ಗಳನ್ನು ಮಾಹಿತಿ ಹಾಕ್ಕು ಕಾಯ್ದೆಯನ್ವಯ ಮಾಹಿತಿ ಶುಲ್ಕವನ್ನು ಪಾವತಿಸಿದ ನಂತರ ಒದಗಿಸುವುದಾಗಿ ಪ್ರತಿವಾದಿಯು ಆಯೋಗದ ಮುಂದೆ ಒಪ್ಪಿಕೊಂಡಿರುತ್ತಾರೆ.

7. ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪ್ರತಿವಾದಿಯ ಒಪ್ಪಿಗೆಯ ಮೇರೆಗೆ , ಆಯೋಗವು ಪ್ರಕರಣವು ಬಗೆಹರಿದಿದೆ ಎಂದು ಪರಿಗಣಿಸಿ , ವಿಲೇವಾರಿ ಮಾಡಿದೆ.

8. ಉಕ್ತಲೇಖನ ಕೊಟ್ಟು ಕರಡು ಆದೇಶವನ್ನು ತಿದ್ದಿ, ನನ್ನ ರುಜುವುನೊಂದಿಗೆ ದಿನಾಂಕ 10ನೇ ಜುಲೈ 2009 ರಂದು ನ್ಯಾಯಾಲಯದಲ್ಲಿ ಘೋಷಿಸಿದೆ.

**(ಡಾ. ಹೆಚ್. ಎನ್. ಕೃಷ್ಣ)**

**ರಾಜ್ಯ ಮಾಹಿತಿ ಆಯುಕ್ತರು**.